# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ಜ್ಞಾನ ಸಂಗಮ" ಬೆಳಗಾವಿ – 590 018

ರಾಷ್ಟ್ರೀಯ ಸೇವಾ ಯೋಜನೆ

ಡಾ.ಎ.ಎಸ್.ದೇಶಪಾಂಡೆ ಬಿ.ಇ., ಎಂ.ಟೆಕ್, ಪಿಹೆಚ್.ಡಿ.
ಕುಲಸಚಿವರು

ದೂರವಾಣಿ ಸಂ : 0831-2405468
ಫ್ಯಾಕ್ಸ ಸಂ : 0831-2405467


ಸಂ. ವಿತಾವಿ/ಬಿ.ಜಿ.ಎಮ್/ರಾ.ಸೇ.ಯೋ/ಸು.ಮ.ವ/37/2019-20/ 2980    ದಿನಾಂಕ: 31 JUL 2019

**:ಸುತ್ತೋಲೆ:**

**ವಿಷಯ :** 50ನೇ ವರ್ಷಚರಣೆಯ ಪ್ರಕಟಣೆಗಳ ಬಗ್ಗೆ.
**ಉಲ್ಲೇಖ:** ಯುಸೇಇ/ರಾ.ಸೇಯೋ/37/2019-20/244 ದಿನಾಂಕ: 29/07/2019

2019 ಸೆಪ್ಟೆಂಬರ್ 24ರಿಂದ 2020ರ ಸೆಪ್ಟೆಂಬರ್‌ವರೆಗೆ ರಾಷ್ಟ್ರೀಯ ಸೇವಾ ಯೋಜನೆಯ ಸುವರ್ಣ ಮಹೋತ್ಸವ ಆಚರಿಸಲು ನಿರ್ಧರಿಸಿರುವುದು ತಮಗೆ ತಿಳಿದಿದೆ. ಇದರ ಅಂಗವಾಗಿ ಈ ಕೆಳಗಿನ ಎರಡು ವಿಷಯಗಳ ಕುರಿತಾಗಿ ದಾಖಲಾತಿ ಸಂಗ್ರಹಿಸಿ ಪ್ರಕಟಿಸಲು ನಿರ್ಧರಿಸಲಾಗಿದೆ.

**1. ಯಶಸ್ವಿ ಕಥೆಗಳು (Success Stories)**

ಕಳೆದ ಐವತ್ತು ವರ್ಷಗಳಲ್ಲಿ ರಾಷ್ಟ್ರೀಯ ಸೇವಾ ಯೋಜನೆಯು ವಿವಿಧ ಮಹಾವಿದ್ಯಾಲಯಗಳ ಸಹಕಾರದಿಂದ ಹಲವು ಯೋಜನೆಗಳನ್ನು ಜಾರಿಗೆ ತಂದಿದೆ.

**ಉದಾಹರಣೆಗೆ:**

1. ಮಂಗಳೂರಿನ ಯನೋಪಾಯ ವಿಶ್ವವಿದ್ಯಾನಿಲಯವು ಸ್ವಂತ ವೆಚ್ಚದಲ್ಲಿ 10,000 ಸ್ವಯಂ ಸೇವಕ / ಸೇವಕಿಯರಿಗೆ ಕ್ಯಾನ್ಸರ್ ತರಬೇತಿ ನಡೆಸಿದೆ.
2. ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯವು ಕಳೆದ ಎರಡು ವರ್ಷಗಳಲ್ಲಿ 4 ಸಾವಿರ ಶೌಚಾಲಯಗಳನ್ನು ನಿರ್ಮಿಸಿದೆ.
3. ರಾಜೀವ ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯವು ಈಗಾಗಲೇ 1ಲಕ್ಷ ವಿದ್ಯಾರ್ಥಿಗಳಿಗೆ ತಮ್ಮ ಸ್ವಯಂ ಸೇವಕರ ಮೂಲಕ ಆರೋಗ್ಯ ಅರಿವು ನಿರಂತರವಾಗಿ ನೀಡುತ್ತಿದೆ.
4. ಬೆಂಗಳೂರು ವಿಶ್ವವಿದ್ಯಾನಿಲಯವು ಹಲವು ವರ್ಷಗಳ ಹಿಂದೆ ದೇಶದಲ್ಲೆ ಮೊದಲ ಬಾರಿ ಎನ್.ಎಸ್.ಎಸ್. ಭವನವನ್ನು ನಿರ್ಮಿಸಿದೆ.
5. ಮೈಸೂರು ವಿಶ್ವವಿದ್ಯಾನಿಲಯ 1ಕೋಟಿ ವೆಚ್ಚದಲ್ಲಿ ಎನ್.ಎಸ್.ಎಸ್. ಭವನ, ಗಾಂಧಿ ಪಾರ್ಕ್ ಮತ್ತು ಗಾಂಧೀ ಭವನ ನಿರ್ಮಿಸಿದೆ. ಪ್ರತಿವಾರ ನಿರಂತರ ಸ್ವಯಂ ಸೇವಕರಿಗೆ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಿದೆ.
6. ಕೆಲವು ವರ್ಷಗಳ ಹಿಂದೆ ಮಂಗಳೂರು ವಿಶ್ವವಿದ್ಯಾನಿಲಯವು ಪರಿಶಿಷ್ಟ ಜಾತಿ ವರ್ಗಗಳ ಹಾಗೂ ಹಿಂದುಳಿದ ವರ್ಗಗಳ ಜನರಿಗೆ ಮನೆಗಳನ್ನು ನಿರ್ಮಿಸಿದೆ.
7. ಹೀಗೆ ತಾಂತ್ರಿಕ ನಿರ್ದೇಶನಾಲಯ, ತಾಂತ್ರಿಕ ವಿಶ್ವವಿದ್ಯಾನಿಲಯ ಕೃಷಿ ವಿಶ್ವವಿದ್ಯಾನಿಲಯಗಳು ಹಾಗೂ ಇತರ ವಿಶ್ವವಿದ್ಯಾನಿಲಯಗಳು ವಿಶಿಷ್ಟ ಯೋಜನೆಗಳನ್ನು ಜಾರಿಗೆ ತಂದಿದೆ.

ಇದೇ ರೀತಿ ಹಲವು ಕಾಲೇಜುಗಳು ಈ ರೀತಿಯ ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸಿವೆ. ಇದೊಂದು ಯಶಸ್ಸಿನ ಕಥೆ. ವಿಶ್ವವಿದ್ಯಾನಿಲಯ/ನಿರ್ದೇಶನಾಲಯ ಮತ್ತು ಕಾಲೇಜುಗಳು ನಡೆಸಿದ ಈ ಯಶಸ್ವಿ ಯೋಜನೆಗಳು ಜಾರಿಯಾದ ರೀತಿಯನ್ನು ಯಶಸ್ವಿ ಕಥೆಗಳೆಂದು ಕರೆಯಬಹುದು. ಉದಾಹರಣೆಗೆ ಉಡುಪಿಯ ಸರಕಾರಿ ಪ್ರಥಮ ದರ್ಜೆ ಕಾಲೇಜೊಂದು 1996ರಲ್ಲಿ ವಿಶೇಷ ಶಿಬಿರದಲ್ಲಿ 5 ಲಕ್ಷ ರೂಪಾಯಿ ವೆಚ್ಚದಲ್ಲಿ ತನ್ನ ಕಾಲೇಜು ಕಾಂಪೌಂಡ್‌ನ್ನು ನಿರ್ಮಿಸಿದೆ. ಇಂತಹ ಸಾಧನೆಗಳನ್ನು ನೂರಾರು ಕಾಲೇಜುಗಳು / ವಿಶ್ವವಿದ್ಯಾನಿಲಯ ಹಾಗೂ ನಿರ್ದೇಶನಾಲಯಗಳು ಮಾಡಿವೆ, ಇಲ್ಲಿ ಕೆಲವು ಉದಾಹರಣೆಗಳನ್ನು ಮಾತ್ರ ನೀಡಲಾಗಿದೆ.

ತಮ್ಮ ಅಭಿಯಾಂತ್ರಿಕ/ತಾಂತ್ರಿಕ ಮಹಾವಿದ್ಯಾಲಯದಲ್ಲಿ ಕಳೆದ ಹಲವು ವರ್ಷಗಳಲ್ಲಿ ನಿರ್ವಹಿಸಿದ ಈ ರೀತಿಯ ಕಾರ್ಯಗಳ ಬಗ್ಗೆ ಒಂದು ಪುಟ ಮೀರದಂತೆ ಯೋಜನೆಯ ಹಿನ್ನಲೆ, ಅನುಷ್ಠಾನ, ಯಶಸ್ಸು ಇತ್ಯಾದಿಗಳ ಬಗ್ಗೆ ಬರೆದು ಕಳುಹಿಸುವುದು. ಇದನ್ನು ರಾಜ್ಯ ಕೋಶವು ಪ್ರಕಟಿಸಲು ನಿರ್ಧರಿಸಿದೆ. ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಇದು ಅರ್ಥಪೂರ್ಣ ದಾಖಲಾತಿಯಾಗಬಹುದು. ಶೌಚಾಲಯ – ಮನೆ ನಿರ್ಮಾಣ, ಕಾಂಪೌಂಡ್–ಕ್ರೀಡಾಂಗಣ ನಿರ್ಮಾಣ, ಇತರೆ ನಿರ್ಮಾಣಗಳನ್ನು, ಕೆರೆಹೂಳೆತ್ತುವಿಕೆ – ಪುನರ್ ನಿರ್ಮಾಣ, ನಿರಂತರ ಅರಿವು ಕಾರ್ಯಕ್ರಮ, ಹೊಸ ಕ್ರೀಡಾಂಗಣ ನಿರ್ಮಾಣ, ನಿರಂತರ ತರಬೇತಿ ಕಾರ್ಯಕ್ರಮ ಹೀಗೆ ಫಲಾನುಭವಿಗಳ ವಿವರಗಳೊಂದಿಗೆ ಯಶಸ್ವಿ ಕಥೆಗಳನ್ನು ಕಳುಹಿಸಬಹುದು.

ತಾವು ಕಳುಹಿಸುವ ಯಶಸ್ಸಿನ ಕಥೆಗಳು ಈ ರೀತಿ ಇರಲಿ.

1. ನಿರೂಪಣೆ ರಸವತ್ತಾಗಿರಲಿ ಅನುಭವ ಯುಕ್ತವಾಗಿರಲಿ, ಸಂಖ್ಯಾ ವಿವರವಾಗಿರಲಿ.
2. ಒಂದು ಪುಟಕ್ಕೆ ಮೀರದಿರಲಿ.
3. ಒಂದು ಛಾಯಾ ಚಿತ್ರ ಇದ್ದರೆ ಉತ್ತಮ (ಅನಿವಾರ್ಯವಲ್ಲ)
4. ಹಿಂದಿನ ಕಾರ್ಯಕ್ರಮಾಧಿಕಾರಿಗಳು, ಪ್ರಾಂಶುಪಾಲರು, ಯೋಜನಾಧಿಕಾರಿಗಳು ಮತ್ತು ಸ್ವಯಂ ಸೇವಕರಿಂದ ಸಂಗ್ರಹಿಸಿ ಕಳುಹಿಸಬಹುದು.
5. ಇದು ಅತ್ಯುತ್ತಮ ದಾಖಲಾತಿಯಾದುದರಿಂದ ಕಳೆದ ಹಲವು ವರ್ಷಗಳು ತಮ್ಮ ಕಾಲೇಜಿನ ವಿಶ್ವವಿದ್ಯಾನಿಲಯ/ನಿರ್ದೇಶನಾಲಯಗಳ ವ್ಯಾಪ್ತಿಯ ಮಹತ್ವದ ಕಾರ್ಯಗಳು ಬಿಟ್ಟು ಹೋಗದಂತೆ ಕಳುಹಿಸಬೇಕು.

**2. ಅನುಭವ ಕಥನ**

ಕಳೆದ ಐವತ್ತು ವರ್ಷಗಳಲ್ಲಿ ಲಕ್ಷಾಂತರ ಸ್ವಯ ಸೇವಕರು ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಅವರಲ್ಲಿ ಇಂದು ಹಲವಾರು ಸ್ವಯಂ ಸೇವಕರು ರಾಜಕಾರಣಿ ಮತ್ತು ಮಂತ್ರಿಗಳಾಗಿ, ಅಧಿಕಾರಿಗಳಾಗಿ, ಉಪನ್ಯಾಸಕರಾಗಿ, ಪತ್ರಕರ್ತರಾಗಿ, ನಟರಾಗಿ ವಿದ್ವಾಂಸರಾಗಿ ಸಮಾಜದ ಮುಖ್ಯ ವಾಹಿನಿಯಲ್ಲಿ ಗುರುತಿಸಿಕೊಂಡಿದ್ದಾರೆ. ಅಂತಹ ಗಣ್ಯರ ಅಭಿಪ್ರಾಯ/ಸಂದರ್ಶನಗಳನ್ನು ಸ್ವಯಂ ಸೇವಕರ ಮೂಲಕ ಸಂಗ್ರಹಿಸಿ ಒಂದು ಪುಟ ಮೀರದಂತೆ ಕಳುಹಿಸಿದಲ್ಲಿ ಅದನ್ನು ಪ್ರಕಟಿಸಲಾಗುವುದು ಇದರಿಂದ ರಾಷ್ಟ್ರೀಯ ಸೇವಾ ಯೋಜನೆಯು ಅವರ ವ್ಯಕ್ತಿತ್ವದ ಮೇಲೆ ಬೀರಿದ ಪರಿಣಾಮವನ್ನು ಗುರುತಿಸಲು ಸಾಧ್ಯವಾಗುತ್ತದೆ.

ರಾ.ಸೇ.ಯೋ ಕಾರ್ಯಕ್ರಮಾಧಿಕಾರಿಗಳಿಗೆ ಈ ಮೇಲಿನ ಎರಡೂ ಯೋಜನೆಗಳ ಬಗ್ಗೆ ತಮ್ಮ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದ ವಿವರವನ್ನು ಸಲ್ಲಿಸಲು ನಿರ್ದೇಶನ ನೀಡಲು ಕೋರಲಾಗಿದೆ.

ಇದು ವಿಶ್ವವಿದ್ಯಾನಿಲಯ ಹಿರಿಮೆಯನ್ನು ಹೆಚ್ಚಿಸುವುದರಲ್ಲಿ ಸಂದೇಹವಿಲ್ಲ ಈ ಬಗ್ಗೆ ಬರಹವನ್ನು 16ನೇ ಆಗಸ್ಟ್ 2019ರೊಳಗೆ ವಿತಾವಿಯ ಎನ್.ಎಸ್.ಎಸ್. ಕಛೇರಿಗೆ ಇ–ಮೇಲ್ ಮೂಲಕ (nss@vtu.ac.in) ಕಳುಹಿಸಲು ಕೋರಲಾಗಿದೆ.

ಈ ಬಗ್ಗೆ ಹೆಚ್ಚಿನ ವಿವರಗಳಿಗೆ ರಾಜ್ಯ ಎನ್.ಎಸ್.ಎಸ್ ಅನುಷ್ಠಾನ ಅಧಿಕಾರಿ (84313 88588), ಶ್ರೀಮತಿ. ಕುಸುಮಾದೇವಿ ಎಂ. ಸಿ (94820 18148) ಹಾಗೂ ಸದರಿ ಸ್ಮರಣ ಸಂಚಿಕೆಯ ಸಂಪಾದಕರಾದ ಡಾ. ಸಂತೋಷ್ ಹಾನಗಲ್ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ (9535725499) ಇವರನ್ನು ಸಂಪರ್ಕಿಸಬಹುದು.

ವಂದನೆಗಳೊಂದಿಗೆ,

30.7.2019

ಕುಲಸಚಿವರು

**ಇವರಿಗೆ,**

ಪ್ರಾಂಶುಪಾಲರು ಮತ್ತು ಸಂಯೋಜನಾಧಿಕಾರಿಗಳು, ವಿ.ತಾ.ವಿ. ಅಧಿನಕ್ಕೊಳಪಡುವ ಎಲ್ಲಾ ಅಭಿಯಾಂತ್ರಿಕ/ತಾಂತ್ರಿಕ ಮಹಾವಿದ್ಯಾಲಯಗಳು.

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಕುಲಪತಿಗಳು, ವಿ.ತಾ.ವಿ., ಬೆಳಗಾವಿ ಇವರಿಗೆ ಕುಲಪತಿಗಳ ಕಾರ್ಯದರ್ಶಿಗಳ ಮುಖಾಂತರ.
2. ರಾಜ್ಯ ಎನ್.ಎಸ್.ಎಸ್. ಅಧಿಕಾರಿಗಳು ರಾ.ಸೇ.ಯೋ. ಕೋಶ, ಯುಸೇಇ, ಬೆಂಗಳೂರು.
3. ವಿಶೇಷಾಧಿಕಾರಿಗಳು, ಸಿ.ಎನ್.ಸಿ ವಿಭಾಗ, ವಿತಾವಿ., ಬೆಳಗಾವಿ, ಇವರಿಗೆ ಸದರಿ ಸುತ್ತೋಲೆಯನ್ನು ವಿ.ತಾ.ವಿ.ಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
4. ಕಛೇರಿ ಕಡತಕ್ಕೆ.